# 5. ಸ್ವದೇಶಿ ಸೂತ್ರದ ಸರಳಹಬ್ಬ

**ಶಿವಾನಂದ ಕಳವೆ**

## ಸ್ವಾತಂತ್ರ್ಯ ಹೋರಾಟಗಾರರ ವಿನಂತಿ

ಹಿಂದುಸ್ತಾನದಲ್ಲಿ ಪ್ರತಿಯೊಬ್ಬನ ದಿನದ ಉತ್ಪನ್ನ ಸರಾಸರಿ ಒಂದು ಆಣೆ ಮೂರು ಪೈಸೆಗಳು ಮಾತ್ರ! ಇಲ್ಲಿ 55 ಕೋಟಿ ಜನರ ಸರಾಸರಿ ವರ್ಷದ ಉತ್ಪನ್ನ 1250 ಕೋಟಿಯಿದೆ. ದೇಶದ ಸಾಲವು 1100 ಕೋಟಿಯಿದೆ. ಇದಲ್ಲದೆ ಪ್ರತಿವರ್ಷ 125 ಕೋಟಿ ಪರದೇಶಕ್ಕೆ ಹೋಗುತ್ತಿದೆ. ವಸ್ತುಸ್ಥಿತಿ ಹೀಗಿರುವಾಗ ಹಬ್ಬ, ಹುಣ್ಣಿಮೆಗಳು ಸಮೀಪಿಸಿದ ಈ ದಿನಗಳಲ್ಲಿ ಪರದೇಶಿ ವಸ್ತುಗಳನ್ನು ಕೊಳ್ಳುವುದು ಸರಿಯಲ್ಲ.

ಬಣ್ಣದ ಕಾಗದ, ಗಾಜಿನ ಮಣಿಗಳು, ಬೇಗಡಿ, ಇಮಿಟೇಶನ್ ಮುತ್ತು, ತುರಾಯಿಗಳು ನಮ್ಮ ಹಿಂದುಸ್ತಾನದಂತಹ ಬಡದೇಶಕ್ಕೆ ಅನವಶ್ಯಕ. ಪಟಾಕಿ, ಢಡಾಕಿ, ನೆಲಗುಮ್ಮ ಮುಂತಾದ ವಸ್ತುಗಳು, ವಿದೇಶಿ ಎಂದು ಮಾರಲ್ಪಡುವ ಕರ್ಪೂರ, ಪರದೇಶಿ ಅತ್ತರುಗಳನ್ನು ಖರೀದಿಸಿ ದೇಶಕ್ಕೆ ಒದಗಿರುವ ಸಂಕಟ ಪರಂಪರೆಯನ್ನು ಯಾರೂ ಹೆಚ್ಚಿಸಬಾರದು! ದೇವರ ಪೂಜಾದಿಗಳನ್ನು ಶುದ್ಧ ಶುಭ್ರ ದೇಶೀ ವಸ್ತುಗಳಿಂದಲೇ ಮಾಡಿರಿ, ಪರದೇಶಿ ವಸ್ತುಗಳಿಂದ ದೇವರ ಮೂರ್ತಿಗಳನ್ನು ಭ್ರಷ್ಟ ಮಾಡಬೇಡಿರಿ! ನಮ್ಮ ದೇಶದ ವ್ಯಾಪಾರಿಗಳಿಗೆ, ಗಿರಾಕಿಗಳಿಗೆ ಸ್ವಾತಂತ್ರ್ಯ ಹೋರಾಟಗಾರರು ಕ್ರಿ.ಶ. 1932ರಲ್ಲಿ ವಿನಂತಿಸಿದ್ದ ಪತ್ರದ ಸಾಲುಗಳಿವು. ಅಂದು ಪ್ರಕಟವಾದ ಸತ್ಯಾಗ್ರಹ ಕರಪತ್ರ ಪತ್ರಿಕೆಯ ದೀಪಾವಳಿ ವಿಶೇಷಾಂಕ ಖರೀದಿಗೆ ತಡೆ ಒಡ್ಡುವ, ದೇಶ ಕಟ್ಟುವ ಸಂದೇಶಗಳಿಗೆ ಆದ್ಯತೆ ನೀಡಿತ್ತು.

## ಹಬ್ಬಕ್ಕೆ ದುಂದುವೆಚ್ಚ

ಪಟಾಕಿ, ಕರ್ಪೂರಗಳಿಗೆ ಸಂಪೂರ್ಣ ಬಹಿಷ್ಕಾರ ಹಾಕಬೇಕು! ಕರ್ಪೂರ ನಮ್ಮ ದೇಶದಲ್ಲಿ ಆಗುವುದಲ್ಲ. ವಿದೇಶದ ಕರ್ಪೂರದ ಬದಲು ನಮ್ಮ ಅರಳೆಯ ಬತ್ತಿಗಳನ್ನು ದೀಪಕ್ಕೆ ಉಪಯೋಗಿಸಬೇಕು. ಬತ್ತಿಯ ಆರತಿ ಮಾಡಿದರೆ ದೇವರು ಸಿಟ್ಟಿಗೇಳಲಿಕ್ಕಿಲ್ಲ, ಪಟಾಕಿ ಹೊಡೆಯದಿದ್ದರೆ ಅವನು ಕೋಪಿಸಿಕೊಳ್ಳಲಿಕ್ಕಿಲ್ಲ. ಮಣಿಮುತ್ತುಗಳ ಹಾರ ಹಾಕದಿದ್ದರೆ ಮುನಿಯಲಿಕ್ಕಿಲ್ಲ.

ಹಬ್ಬಕ್ಕೆಂದು ಹಣ ಖರ್ಚು ಮಾಡಬೇಕೆಂಬ ಮನಸ್ಸಿದ್ದರೆ ಯಾವುದಾದರೂ ಪುಣ್ಯ ಕಾರ್ಯಗಳಿಗೆ ಮಾಡಿರಿ. ಬಡವರಿಗೆ ಕರೆದು ಅನ್ನದಾನ ಮಾಡಿರಿ ಹೊರತೂ ಸುಮ್ಮನೆ ಇಂಥ ನಿರುಪಯೋಗಿ ಪದಾರ್ಥಗಳ ಮೇಲೆ ಹಣವನ್ನು ಕಳಕೊಳ್ಳಬೇಡಿರಿ ಎಂದು ಮಾರ್ಮಿಕವಾಗಿ ಹೇಳಿದ್ದರು. ಬರೋಬ್ಬರಿ 80 ವರ್ಷಗಳ ಹಿಂದೆ ಸ್ವಾತಂತ್ರ್ಯ ಹೋರಾಟಗಾರರ ಹಬ್ಬದ ಮಾತುಗಳಿವು. ಆಗ ದೇವರಿಗೆ ಕರ್ಪೂರ ಬಳಸಬಾರದೆಂದು ಅರಿವು ಮೂಡಿಸಲು ಪ್ರತ್ಯೇಕ ಕರಪತ್ರಗಳು ಪ್ರಕಟವಾಗಿದ್ದವು. ಹಬ್ಬದ ಪೂಜಾ ವಿಧಾನಗಳನ್ನು ಸೂಕ್ಷ್ಮವಾಗಿ ಗಣನೆಗೆ ತೆಗೆದುಕೊಂಡಿದ್ದವರು ದುಂದು ವೆಚ್ಚಗಳಿಗೆ ಕಡಿವಾಣ ಹಾಕಲು ಮನೆ ಮನೆಯ ದೇವರ ಪೀಠಗಳಿಂದ ಜಾಗೃತಿಯ ಕಾರ್ಯ ಆರಂಭಿಸಿದರು. ನಾವು ಖರೀದಿಸುವ ವಸ್ತು ಹೇಗೆ ದೇಶದ ವಿದೇಶಿ ಸಾಲ ಏರಿಕೆಗೆ ಕಾರಣವಾಗುತ್ತದೆಂದು ವಿವರಿಸಿ ದಾಸ್ಯದ ಪರಿಣಾಮಗಳನ್ನು ಮನಮುಟ್ಟುವಂತೆ ಮಾರ್ಮಿಕವಾಗಿ ಬಿಂಬಿಸಿದ್ದರು.

## ಹಬ್ಬದ ದೀಪ

ನಮ್ಮ ಪಶ್ಚಿಮ ಘಟ್ಟದ ಕಾಡುಗಳಲ್ಲಿ ತೊಡಕಲುಕುಡಿ ಎಂಬ ಗಿಡವಿದೆ. ಬೂದು ಬಣ್ಣದ ಗಿಡದ ಎಳೆ ಚಿಗುರು ಪೂಜಾರತಿಗೆ ಬಳಕೆ! ಎಳೆಯ ಕುಡಿ ಸಂಗ್ರಹಿಸಿ, ಒಣಗಿಸಿ ಡಬ್ಬದಲ್ಲಿ ಶೇಖರಿಸಿಡಲಾಗುತ್ತಿತ್ತು. ಒಣಗಿದ ಕುಡಿಯನ್ನು ಎಣ್ಣೆಯನ್ನು ಅದ್ದಿ ನಿತ್ಯ ಆರತಿಗೆ ಬಳಸಲಾಗುತ್ತಿತ್ತು. ಇದು ಎಣ್ಣೆಯನ್ನು ಹತ್ತಿಯಂತೆ ಹೀರಿಕೊಂಡು ದೀಪ ಉರಿಯಲು ಸಹಾಯಕವಾಗಿತ್ತು. ಅಂದರೆ ಹತ್ತಿ ಬೆಳೆಯದ ಮಲೆನಾಡಿನಲ್ಲಿ ಕಾಡುಗಿಡದ ಎಳೆಚಿಗುರು ದೀಪದ ಕುಡಿಯಾಗಿತ್ತು. ಇದಲ್ಲದೇ ಅಡಿಕೆ, ತೆಂಗಿನ ತೋಟ, ಹಳ್ಳದಂಚುಗಳಲ್ಲಿ ನಾಗಸಂಪಿಗೆ ಮರಗಳಿದ್ದವು, ಅವುಗಳ ಬೀಜ ಸಂಗ್ರಹಿಸಿ ದೀಪಕ್ಕೆ ಬಳಕೆ. ಇದರ ಹಸಿಬೀಜಗಳಲ್ಲಿ ಎಣ್ಣೆಯ ಅಂಶ ಜಾಸ್ತಿಯಿರುವುದರಿಂದ ಚೆನ್ನಾಗಿ ಉರಿಯುತ್ತದೆ. ದೀಪಾವಳಿ, ಕಾರ್ತೀಕಮಾಸದಲ್ಲಿ ನಾಗಸಂಪಿಗೆ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಿ ಉರಿಸಲಾಗುತ್ತಿತ್ತು. ಇದಲ್ಲದೆ ಅಡಿಕೆ ತೋಟಗಳಂಚಿನಲ್ಲಿ ಒಂದೆರಡು ಜವಾರಿ ಹತ್ತಿ ಗಿಡಗಳಿರುತ್ತಿದ್ದವು. ಅವು ಹಲವು ವರ್ಷಗಳಿಂದ ಬೆಳೆಯುತ್ತ ಹೂವರಳಿಸುತ್ತ ಹತ್ತಿ ನೀಡುತ್ತಿದ್ದವು. ಈ ಹತ್ತಿಯನ್ನು ದೀಪಕ್ಕೆ ಬಳಸುವ ಪರಿಪಾಠವಿತ್ತು. ಒಟ್ಟಿನಲ್ಲಿ ಪೇಟೆ ಖರೀದಿಯ ಯಾವ ಅಗತ್ಯವಿಲ್ಲದೇ ಹಬ್ಬದ ದೀಪ ಬೆಳಗುವ ಸುಲಭ ಅವಕಾಶಗಳಿದ್ದವು.

## ಇಂದಿನ ಹಬ್ಬದ ದಿನಗಳು

ಈಗ ಹಬ್ಬ ಅಂದರೆ ಖರೀದಿ, ಬಟ್ಟೆಗಳು ಬೇಕು, ಮನೆಗೆ ಫ್ರಿಜ್, ಹೊಸ ಟಿವಿ, ವಾಹನ ಹೀಗೆ ಒಂದಿಲ್ಲೊಂದು ವಸ್ತುಗಳು ಬೇಕು. ಒಟ್ಟಿನಲ್ಲಿ ಹಬ್ಬ ಅಂದರೆ ಮಾರುಕಟ್ಟೆ ಜನಸಂದಣಿ, ಹಬ್ಬ ಅಂದರೆ ಹಣ ಖರ್ಚು. ಬಟ್ಟೆ, ಪಟಾಕಿ, ಅಲಂಕಾರಿಕ ವಸ್ತು ಹೀಗೆ ನಮ್ಮನ್ನು ಸೆಳೆಯುವ ಸಂಗತಿಗಳು ಒಂದೆರಡಲ್ಲ!. 'ಹಬ್ಬದ ವಿಶೇಷ ರಿಯಾಯತಿ, ಹಬ್ಬದ ಡಬ್ಬಲ್ ಧಮಕಾ' ಎಂದು ನಮ್ಮ ಮಾಧ್ಯಮ ಜಾಹಿರಾತು ತಂತ್ರಗಳು ಕೊಳ್ಳುಬಾಕರನ್ನು ಸೃಷ್ಟಿಸುತ್ತಿವೆ, ದೇಶ ಕಟ್ಟುವ ಸಂದೇಶ ಮರೆತು ಜಾಹಿರಾತು ಲಾಭ, ವ್ಯಾವಹಾರಿಕ ಗಿಮಿಕ್‌ಗಳ ಮೊರೆ ಹೋಗಿವೆ. ಕಿಸೆ ಖಾಲಿಮಾಡಿಸಿ ಮಾರುಕಟ್ಟೆಯಲ್ಲಿ ಮಂಗನನ್ನಾಗಿಸುವ ಸೂತ್ರಗಳಿಗೆ ನಮ್ಮ ನರ್ತನ ನಡೆದಿದೆ. ಹಬ್ಬದ ಹೊಸ ಸಾಲ ಹನುಮಂತನ ಬಾಲವಾಗಿ ಬೆಳೆಯುತ್ತಿದೆ. ಸರಳ ಬದುಕು ಆದರ್ಶವಾಗಿದ್ದ ನೆಲದಲ್ಲಿ ಆಡಂಬರ, ರಂಗು, ನಾಟಕೀಯತೆ ಸೇರಿಕೊಂಡು ಬದುಕು ಲಗಾಮಿಲ್ಲದ ಓಟ ಕಿತ್ತಿದೆ. ಸಂಪ್ರದಾಯ, ದೇವರ ನಂಬಿಕೆಗಳಿಗಿಂತ ಹಬ್ಬಗಳು ಖರೀದಿಯ ಸವಾಲು ಒಡ್ಡಿ ಮನೆ ಮನಗಳನ್ನು ಕಾಡುತ್ತಿವೆ. ಆಚರಣೆಯ ಶ್ರದ್ಧೆ ಮರೆಯಾಗಿ ಖರೀದಿ ವಿಜೃಂಭಿಸಿದೆ! ಅಷ್ಟೇಕೆ, ರಾತ್ರಿ ಹಗಲಾಗಿಸುವ ವಿದ್ಯುತ್ ದೀಪಾಲಂಕಾರದಲ್ಲಿ ಪರದೇಶಿ ಚೈನಾ ಬಲ್ಬ್ ಮೆರೆದಿದೆ! ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಮರುಗಿವೆ.

## ಟೋಪಿಗಳು

ಸ್ವಾತಂತ್ರ್ಯ ಸಮರ ಕಾಲದಲ್ಲಿ ಖಾದಿ ಪ್ರಸಾರ ಜೋರಾಗಿತ್ತು, ಹೋರಾಟಗಾರರು ನುಡಿದಂತೆ ನಡೆಯುವವರಾಗಿದ್ದರು. ಮಕ್ಕಳಿಗೆ ಹಬ್ಬಗಳಲ್ಲಿ ಜರಿ ಟೋಪಿ ತೊಡಿಸುವ ಪದ್ಧತಿ ಬೆಳೆಯುತ್ತಿತ್ತು. ಬೆಳ್ಳಿ, ಬಂಗಾರದ ಜರಿಗಳಿದ್ದ ಈ ಟೋಪಿಗಳು ವಿದೇಶದಿಂದ ಆಮದಾಗುತ್ತಿದ್ದವು. ಮಕ್ಕಳ ತಲೆಯಲ್ಲಿ ವಿದೇಶಿ ಟೋಪಿ ಏಕೆ? ಪ್ರತಿಭಟನೆ ಶುರುವಾಯಿತು. ಉತ್ತರ ಕನ್ನಡದ ಸಿದ್ದಾಪುರದಲ್ಲಿ ಟೋಪಿಗಳನ್ನು ರಾಶಿ ಹಾಕಿ ಸುಡಲಾಯಿತು. ಕ್ರಿ.ಶ. 1932ರ ಒಂದು ದಿನ ಸುಟ್ಟ ಇಂತಹ ಜರಿ ಟೋಪಿಗಳಿಂದ ಮೂವತ್ತು ತೊಲೆ ಬೆಳ್ಳಿ ದೊರಕಿತ್ತಂತೆ! ಆದರೆ ಈಗ ನಾವು ಬಹಳ

ಬದಲಾಗಿದ್ದೇವೆ. ಹಬ್ಬಗಳ ಆಡಂಬರದ ಪ್ರದರ್ಶನದಲ್ಲಿ, ವಿದೇಶಗಳಿಂದ ಬಂದು ಗುಡ್ಡೆಬೀಳುವ ಅಗ್ಗದ ಸರಕುಗಳಿಂದ ಸ್ವದೇಶಿ, ಸ್ವಾವಲಂಬನೆ ಸೂತ್ರಗಳು ಕರ್ಪೂರದಂತೆ ಕರಗಿವೆ.

**ಅಭ್ಯಾಸ ಪ್ರಶ್ನೋತ್ತರಗಳು**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು-ಎರಡು ವಾಕ್ಯಗಳಲ್ಲಿ ಉತ್ತರಿಸಿ.**

**1. ಯಾವ ಯಾವ ವಸ್ತುಗಳನ್ನು ಬಳಸಬೇಡಿರೆಂದು ಜನಾಂದೋಲನ ಮಾಡಲಾಯಿತು?**

**ಉತ್ತರ:** ಪಟಾಕಿ, ಢಡಾಕಿ, ನೆಲಗುಮ್ಮ ಮುಂತಾದ ವಸ್ತುಗಳು ಹಾಗೂ ವಿದೇಶಿ ಎಂದು ಮಾರಲ್ಪಡುವ ಕರ್ಪೂರ, ಪರದೇಶಿ ಅತ್ತರುಗಳನ್ನು ಬಳಸಬೇಡಿರೆಂದು ಜನಾಂದೋಲನ ಮಾಡಲಾಯಿತು.

**2. ಸತ್ಯಾಗ್ರಹ ಕರಪತ್ರ ಪತ್ರಿಕೆಯ ದೀಪಾವಳಿ ವಿಶೇಷಾಂಕ ಯಾವ ಸಂದೇಶಗಳಿಗೆ ಆದ್ಯತೆ ನೀಡಿತ್ತು?**

**ಉತ್ತರ:** ಸತ್ಯಾಗ್ರಹ ಕರಪತ್ರ ಪತ್ರಿಕೆಯ ದೀಪಾವಳಿ ವಿಶೇಷಾಂಕ ಖರೀದಿಗೆ ತಡೆ ಒಡ್ಡುವ ಮತ್ತು ದೇಶ ಕಟ್ಟುವ ಸಂದೇಶಗಳಿಗೆ ಆದ್ಯತೆ ನೀಡಿತ್ತು.

**3. ಯಾವ ವಸ್ತುಗಳಿಗೆ ಸಂಪೂರ್ಣ ಬಹಿಷ್ಕಾರ ಹಾಕಬೇಕೆಂದು ಲೇಖಕರು ಮಾರ್ಮಿಕವಾಗಿ ತಿಳಿಸಿದ್ದಾರೆ?**

**ಉತ್ತರ:** 'ಪಟಾಕಿ, ಕರ್ಪೂರಗಳಿಗೆ ಸಂಪೂರ್ಣ ಬಹಿಷ್ಕಾರ ಹಾಕಬೇಕು!' ಎಂದು ಸ್ವಾತಂತ್ರ್ಯಹೋರಾಟಗಾರರು ಮಾರ್ಮಿಕವಾಗಿ ತಿಳಿಸಿದ್ದಾರೆ.

**5. ವಿದೇಶದ ಕರ್ಪೂರದ ಯಾವ ಬತ್ತಿಗಳನ್ನು ದೀಪಕ್ಕೆ ಉಪಯೋಗಿಸಬೇಕೆಂದು ಲೇಖಕರು ಹೇಳಿದ್ದಾರೆ?**

**ಉತ್ತರ:** ವಿದೇಶದ ಕರ್ಪೂರದ ಬದಲು ನಮ್ಮ ಅರಳೆಯ ಬತ್ತಿಗಳನ್ನು ದೀಪಕ್ಕೆ ಉಪಯೋಗಿಸಬೇಕು ಎಂದು ಲೇಖಕರು ಹೇಳಿದ್ದಾರೆ.

**6. ದೀಪಾವಳಿ, ಕಾರ್ತೀಕಮಾಸದಲ್ಲಿ ದೀಪ ಬೆಳಗುವ ಬದಲು ಏನನ್ನು ಉರಿಸಲಾಗುತ್ತಿತ್ತು?**

**ಉತ್ತರ:** ದೀಪಾವಳಿ, ಕಾರ್ತೀಕಮಾಸದಲ್ಲಿ ನಾಗಸಂಪಿಗೆ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಿ ಉರಿಸಲಾಗುತ್ತಿತ್ತು.

**7. ಸಂಪ್ರದಾಯ, ದೇವರ ನಂಬಿಕೆಗಳಿಗಿಂತ ಹಬ್ಬಗಳು ಯಾವ ಸವಾಲನ್ನು ಒಡ್ಡಿ ಮನೆ-ಮನಗಳನ್ನು ಕಾಡುತ್ತಿವೆ.?**

**ಉತ್ತರ:** ಸಂಪ್ರದಾಯ, ದೇವರ ನಂಬಿಕೆಗಳಿಗಿಂತ ಹಬ್ಬಗಳು ಖರೀದಿಯ ಸವಾಲು ಒಡ್ಡಿ ಮನೆ ಮನಗಳನ್ನು ಕಾಡುತ್ತಿವೆ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

**1.ಸ್ವಾತಂತ್ರ್ಯಪೂರ್ವದಲ್ಲಿ ಹೋರಾಟಗಾರರು ಗಿರಾಕಿಗಳು ಮತ್ತು ಅಂಗಡಿಯವರನ್ನು ಏನೆಂದು ವಿನಂತಿಸಿಕೊಂಡರು?**

**ಉತ್ತರ:** "ಹಬ್ಬ, ಹುಣ್ಣಿಮೆಗಳು ಸಮೀಪಿಸಿದ ದಿನಗಳಲ್ಲಿ ಪರದೇಶಿ ವಸ್ತುಗಳನ್ನು ಕೊಳ್ಳುವುದು ಸರಿಯಲ್ಲ. ಬಣ್ಣದ ಕಾಗದ, ಗಾಜಿನ ಮಣಿಗಳು, ಬೇಗಡಿ, ಇಮಿಟೇಶನ್ ಮುತ್ತು, ತುರಾಯಿಗಳು ನಮ್ಮ ಹಿಂದುಸ್ತಾನದಂತಹ ಬಡದೇಶಕ್ಕೆ ಅನವಶ್ಯಕ. ಪಟಾಕಿ, ಢಡಾಕಿ, ನೆಲಗುಮ್ಮ ಮುಂತಾದ ವಸ್ತುಗಳು, ವಿದೇಶಿ ಎಂದು ಮಾರಲ್ಪಡುವ ಕರ್ಪೂರ, ಪರದೇಶಿ ಅತ್ತರುಗಳನ್ನು ಖರೀದಿಸಿ ದೇಶಕ್ಕೆ ಒದಗಿರುವ ಸಂಕಟ ಪರಂಪರೆಯನ್ನು ಯಾರೂ ಹೆಚ್ಚಿಸಬಾರದು! ದೇವರ ಪೂಜಾದಿಗಳನ್ನು ಶುದ್ಧ ಶುಭ್ರ ದೇಶೀ ವಸ್ತುಗಳಿಂದಲೇ ಮಾಡಿರಿ, ಪರದೇಶಿ ವಸ್ತುಗಳಿಂದ ದೇವರ ಮೂರ್ತಿಗಳನ್ನು ಭ್ರಷ್ಟ ಮಾಡಬೇಡಿರಿ!" – ಎಂದು ಸ್ವಾತಂತ್ರ್ಯಪೂರ್ವದಲ್ಲಿ ಹೋರಾಟಗಾರರು ಗಿರಾಕಿಗಳು ಮತ್ತು ಅಂಗಡಿಯವರನ್ನು ವಿನಂತಿಸಿಕೊಂಡರು.

**3. ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?**

**ಉತ್ತರ:** ಪಶ್ಚಿಮ ಘಟ್ಟದ ಕಾಡುಗಳಲ್ಲಿ ತೊಡಕಲುಕುಡಿ ಎಂಬ ಬೂದು ಬಣ್ಣದ ಗಿಡದ ಎಳೆಯ ಕುಡಿ ಸಂಗ್ರಹಿಸಿ, ಒಣಗಿಸಿ ಡಬ್ಬದಲ್ಲಿ ಶೇಖರಿಸಿಡಲಾಗುತ್ತಿತ್ತು. ಒಣಗಿದ ಕುಡಿಯನ್ನು ಎಣ್ಣೆಯನ್ನು ಅದ್ದಿ ನಿತ್ಯ ಆರತಿಗೆ ಬಳಸಲಾಗುತ್ತಿತ್ತು. ಇದು ಎಣ್ಣೆಯನ್ನು ಹತ್ತಿಯಂತೆ ಹೀರಿಕೊಂಡು ದೀಪ ಉರಿಯಲು ಸಹಾಯಕವಾಗಿತ್ತು. ನಾಗಸಂಪಿಗೆ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಿ ಉರಿಸಲಾಗುತ್ತಿತ್ತು. ಇದಲ್ಲದೆ ಅಡಿಕೆ ತೋಟಗಳಂಚಿನಲ್ಲಿ ಬೆಳೆಯುತ್ತಿದ್ದ ಜವಾರಿ ಹತ್ತಿ ಗಿಡಗಳ ಹತ್ತಿಯನ್ನು ದೀಪಕ್ಕೆ ಬಳಸುವ ಮೂಲಕ ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಾಯಿತು.

**4. ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಮರುಗಿವೆ – ಏಕೆ?**

**ಉತ್ತರ:** ಆಚರಣೆಯ ಶ್ರದ್ಧೆ ಮರೆಯಾಗಿ ಖರೀದಿ ವಿಜೃಂಭಿಸಿದೆ! ಅಷ್ಟೇಕೆ, ರಾತ್ರಿ ಹಗಲಾಗಿಸುವ ವಿದ್ಯುತ್ ದೀಪಾಲಂಕಾರದಲ್ಲಿ ಪರದೇಶಿ ಚೈನಾ ಬಲ್ಬ್ ಮೆರೆದಿದೆ! ಆದ್ದರಿಂದ ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಮರುಗಿವೆ.

**5. ಸ್ವದೇಶೀ ಆರ್ಥಿಕತೆ ಬಲಪಡಿಸಲು ಹಬ್ಬಗಳಲ್ಲಿ ಸ್ವದೇಶೀ ವಸ್ತುಗಳನ್ನೇ ಬಳಸಲು ಪ್ರಾರಂಭಿಸಬೇಕು – ಈ ಕುರಿತು ನಿಮ್ಮ ಅಭಿಪ್ರಾಯವೇನು?**

**ಉತ್ತರ:** ವಿದೇಶೀ ವಸ್ತುಗಳನ್ನು ಕೊಳ್ಳುವುದರಿಂದ ಅವುಗಳ ಮಾರಾಟದ ಲಾಭವು ವಿದೇಶಗಳ ಪಾಲಾಗುತ್ತದೆ. ಸ್ವದೇಶೀ ವಸ್ತುಗಳನ್ನೇ ಬಳಸುವುದರಿಂದ ನಮ್ಮ ದೇಶದಲ್ಲಿ ಉತ್ಪನ್ನವಾದ ವಸ್ತುಗಳಿಗೆ ಬೇಡಿಕೆ ದೊರೆತು ಅದರಿಂದ ಬರುವ ಲಾಭ ನಮ್ಮ ದೇಶದ ಉತ್ಪಾದಕರಿಗೆ ದೊರೆಯುತ್ತದೆ. ಹೀಗೆ ಲಾಭಾಂಶವು ನಮ್ಮ ದೇಶದಲ್ಲೇ ಉಳಿಯುವುದರಿಂದ ಹಾಗು ನಮ್ಮ ದೇಶದ ಜನರಿಗೆ ಅದರ ಲಾಭ ದೊರೆಯುವುದರಿಂದ ದೇಶದ ಆರ್ಥಿಕತೆ ಬಲಪಡುತ್ತದೆ. ಆಮೂಲಕ ದೇಶದ ಸಾಲದ ಪ್ರಮಾಣವೂ ಕಡಿಮೆಯಾಗುತ್ತದೆ.

**6. ಸ್ವಾತಂತ್ರ್ಯ ಹೋರಾಟಗಾರರು ಕ್ರಿ.ಶ. 1932ರಲ್ಲಿ ವಿನಂತಿಸಿದ್ದ ಪತ್ರದ ಸಾಲುಗಳಲ್ಲಿ ಯಾವ ಯಾವ ವಿದೇಶೀ ವಸ್ತುಗಳನ್ನು ಖರೀದಿಸಬಾರದೆಂದು ಉಲ್ಲೇಖಿಸಿದ್ದಾರೆ?**

**ಉತ್ತರ:** ಸ್ವಾತಂತ್ರ್ಯ ಹೋರಾಟಗಾರರು ಕ್ರಿ.ಶ. 1932ರಲ್ಲಿ ಬರೆದ ಪತ್ರದ ಸಾಲುಗಳಲ್ಲಿ ಬಣ್ಣದ ಕಾಗದ, ಗಾಜಿನ ಮಣಿಗಳು, ಬೇಗಡಿ, ಇಮಿಟೇಶನ್ ಮುತ್ತು, ತುರಾಯಿಗಳು, ಪಟಾಕಿ, ಢಡಾಕಿ, ನೆಲಗುಮ್ಮ, ಕರ್ಪೂರ, ಪರದೇಶಿ ಅತ್ತರುಗಳನ್ನು ಖರೀದಿಸಬಾರದು ಎಂದು ವಿನಂತಿಸಿದ್ದಾರೆ.

**7. ಸ್ವಾತಂತ್ರ್ಯ ಹೋರಾಟಗಾರರು ಕ್ರಿ.ಶ. 1932ರಲ್ಲಿ ವಿನಂತಿಸಿದ್ದ ಪತ್ರದ ಸಾಲುಗಳಲ್ಲಿ ದೇವರ ಪೂಜಾದಿಗಳನ್ನು ಮಾಡುವ ಬಗ್ಗೆ ಏನೆಂದು ವಿನಂತಿಸಿದ್ದಾರೆ?**

**ಉತ್ತರ:** ಸ್ವಾತಂತ್ರ್ಯ ಹೋರಾಟಗಾರರು ಕ್ರಿ.ಶ. 1932ರಲ್ಲಿ ಬರೆದ ವಿನಂತಿಪತ್ರದ ಸಾಲುಗಳಲ್ಲಿ ದೇವರ ಪೂಜಾದಿಗಳನ್ನು ಶುದ್ಧ ಶುಭ್ರ ದೇಶೀ ವಸ್ತುಗಳಿಂದಲೇ ಮಾಡಿರಿ, ಪರದೇಶಿ ವಸ್ತುಗಳಿಂದ ದೇವರ ಮೂರ್ತಿಗಳನ್ನು ಭ್ರಷ್ಟ ಮಾಡಬೇಡಿರಿ! ಎಂದು ಉಲ್ಲೇಖಿಸಿದ್ದಾರೆ.

**8. ಹಬ್ಬಕ್ಕೆಂದು ಹಣ ಖರ್ಚು ಮಾಡುವ ಬಗ್ಗೆ ಸ್ವಾತಂತ್ರ್ಯ ಹೋರಾಟಗಾರರು ಮಾರ್ಮಿಕವಾಗಿ ಏನೆಂದು ಹೇಳಿದ್ದರು?**

**ಉತ್ತರ**: ಹಬ್ಬಕ್ಕೆಂದು ಹಣ ಖರ್ಚು ಮಾಡಬೇಕೆಂಬ ಮನಸ್ಸಿದ್ದರೆ ಯಾವುದಾದರೂ ಪುಣ್ಯ ಕಾರ್ಯಗಳಿಗೆ ಮಾಡಿರಿ. ಬಡವರಿಗೆ ಕರೆದು ಅನ್ನದಾನ ಮಾಡಿರಿ ಹೊರತೂ ಸುಮ್ಮನೆ ಪಟಾಕಿ, ಕರ್ಪೂರ ಇತ್ಯಾದಿ ನಿರುಪಯೋಗಿ ಪದಾರ್ಥಗಳ ಮೇಲೆ ಹಣವನ್ನು ಕಳಕೊಳ್ಳಬೇಡಿರಿ ಎಂದು ಸ್ವಾತಂತ್ರ್ಯ ಹೋರಾಟಗಾರರು ಮಾರ್ಮಿಕವಾಗಿ ಹೇಳಿದ್ದರು.

**9. ಈ ಆಧುನಿಕ ಯುಗದಲ್ಲಿ ಹಬ್ಬ ಎಂದಾಕ್ಷಣ ನಮ್ಮನ್ನು ಸೆಳೆಯುವ ಸಂಗತಿಗಳಾವುವು?**

**ಉತ್ತರ**: ಈ ಆಧುನಿಕ ಯುಗದಲ್ಲಿ ಹಬ್ಬ ಅಂದರೆ ಖರೀದಿ, ಬಟ್ಟೆಗಳು ಬೇಕು, ಮನೆಗೆ ಫ್ರಿಜ್, ಹೊಸ ಟಿವಿ, ವಾಹನ ಹೀಗೆ ಒಂದಿಲ್ಲೊಂದು ವಸ್ತುಗಳು ಬೇಕು. ಒಟ್ಟಿನಲ್ಲಿ ಹಬ್ಬ ಅಂದರೆ ಮಾರುಕಟ್ಟೆ ಜನಸಂದಣಿ, ಹಬ್ಬ ಅಂದರೆ ಹಣ ಖರ್ಚು. ಬಟ್ಟೆ, ಪಟಾಕಿ, ಅಲಂಕಾರಿಕ ವಸ್ತು ಹೀಗೆ ಅನೇಕ ಸಂಗತಿಗಳು ನಮ್ಮನ್ನು ಸೆಳೆಯುತ್ತವೆ.

**10. ಮಾಧ್ಯಮ ಜಾಹಿರಾತುಗಳ ತಂತ್ರಗಳು ಮತ್ತು ಗಿಮಿಕ್‌ಗಳನ್ನು ಕುರಿತು ಲೇಖಕರು ಏನೆಂದು ಹೇಳಿದ್ದಾರೆ?**

**ಉತ್ತರ**: 'ಹಬ್ಬದ ವಿಶೇಷ ರಿಯಾಯತಿ, ಹಬ್ಬದ ಡಬ್ಬಲ್ ಧಮಕಾ' ಎಂದು ನಮ್ಮ ಮಾಧ್ಯಮ ಜಾಹಿರಾತು ತಂತ್ರಗಳು ಕೊಳ್ಳುಬಾಕರನ್ನು ಸೃಷ್ಟಿಸುತ್ತಿವೆ. ದೇಶ ಕಟ್ಟುವ ಸಂದೇಶ ಮರೆತು ಜಾಹಿರಾತು ಲಾಭ, ವ್ಯಾವಹಾರಿಕ ಗಿಮಿಕ್‌ಗಳ ಮೊರೆ ಹೋಗಿವೆ. ಕಿಸೆ ಖಾಲಿಮಾಡಿಸಿ ಮಾರುಕಟ್ಟೆಯಲ್ಲಿ ಮಂಗನನ್ನಾಗಿಸುವ ಸೂತ್ರಗಳಿಗೆ ನಮ್ಮ ನರ್ತನ ನಡೆದಿದೆ. ಹಬ್ಬದ ಹೊಸ ಸಾಲ ಹನುಮಂತನ ಬಾಲವಾಗಿ ಬೆಳೆಯುತ್ತಿದೆ. ಎಂದು ಲೇಖಕರು ಹೇಳಿದ್ದಾರೆ.

**11. ವಿದೇಶೀ ಟೋಪಿಗಳನ್ನು ತೊಡುವುದರ ವಿರುದ್ಧ ನಡೆದ ಸ್ವದೇಶೀ ಆಂದೋಲನದ ಬಗ್ಗೆ ವಿವರಿಸಿ.**

**ಉತ್ತರ**: ಸ್ವಾತಂತ್ರ್ಯ ಸಮರ ಕಾಲದಲ್ಲಿ ಖಾದಿ ಪ್ರಸಾರ ಜೋರಾಗಿತ್ತು, ಆಗ ಮಕ್ಕಳಿಗೆ ಹಬ್ಬಗಳಲ್ಲಿ ಜರಿ ಟೋಪಿ ತೊಡಿಸುವ ಪದ್ಧತಿ ಬೆಳೆಯುತ್ತಿತ್ತು. ಬೆಳ್ಳಿ, ಬಂಗಾರದ ಜರಿಗಳಿದ್ದ ಈ ಟೋಪಿಗಳು ವಿದೇಶದಿಂದ ಆಮದಾಗುತ್ತಿದ್ದವು. ಮಕ್ಕಳ ತಲೆಯಲ್ಲಿ ವಿದೇಶಿ ಟೋಪಿ ಏಕೆಂದು ಪ್ರತಿಭಟನೆ ಶುರುವಾಯಿತು. ಉತ್ತರ ಕನ್ನಡದ ಸಿದ್ದಾಪುರದಲ್ಲಿ ಟೋಪಿಗಳನ್ನು ರಾಶಿ ಹಾಕಿ ಸುಡಲಾಯಿತು. ಕ್ರಿ.ಶ. 1932ರ ಒಂದು ದಿನ ಸುಟ್ಟ ಇಂತಹ ಜರಿ ಟೋಪಿಗಳಿಂದ ಮೂವತ್ತು ತೊಲೆ ಬೆಳ್ಳಿ ದೊರಕಿತ್ತಂತೆ!.